# ಬಾಲ್ಯದ ಭೂಮಿಕೆಯಾಗಿತ್ತು ಈ ಭವನ!

**ಹಲವು ದಶಕಗಳಷ್ಟು ಹಿಂದಿನ ಮನೆಯ ನೆನಪು ಸದಾ ಮನದಲ್ಲಿ ನೆನಪಾಗಿ ಉಳಿದಿದೆ. ಬಾಲ್ಯದಲ್ಲಿದ್ದ ಮನೆಯ ಚಿತ್ರ ನೋಡಿದಾಗ ಇವುಗಳಿಗೆ ಅಕ್ಷರ ರೂಪ ನೀಡಿ ಮತ್ತಷ್ಟು ಮನ ಪುಳಕಗೊಂಡಿತು.**

**■ ಮಂಜುನಾಥ ಡಿ.ಎಸ್.**

ಹಳೆಯ ಆಲ್ಬಂನ ಆರಂಭದ ಪುಟದಲ್ಲಿ ವಿರಾಜಿಸುತ್ತಿದ್ದ ಮನೆಯ ಮುಂಭಾಗದ ಅಪರೂಪದ ಚಿತ್ರಗಳು ನನ್ನನ್ನು ಆರು ದಶಕಗಳಷ್ಟು ಹಿಂದಕ್ಕೆ ಕೊಂಡೊಯ್ದವು. ಆ ಮನೆಯಲ್ಲಿ ಕಳೆದ ಬಾಲ್ಯದ ದಿನಗಳ ನೆನಪಿನ ಪುಟಗಳು ಒಂದೊಂದಾಗಿ ತೆರೆದುಕೊಂಡವು. ಪ್ರತಿ ಘಟನೆಯೂ ಇದೀಗ ಸಂಭವಿಸುತ್ತಿರುವಂತೆ ಭಾಸವಾಯಿತು. ಮನಃಪಟಲದ ಮೇಲೆ ಮೂಡಿ ಬಂದ ಕೆಲವು ಚಿತ್ರಗಳಿಗೆ ಅಕ್ಷರ ರೂಪ ನೀಡುವಾಗ ಮನಸ್ಸು ಇನ್ನಷ್ಟು ಮುದಗೊಳ್ಳುತ್ತದೆ.

ಕೋಲಾರ ತಾಲ್ಲೂಕಿನಲ್ಲಿರುವ, ಹತ್ತು ನಿಮಿಷಗಳಲ್ಲಿ ಸುತ್ತಿ ಬರಬಹುದಾದ ಕಿರುಗ್ರಾಮ ಕ್ಯಾಲನೂರಿನಲ್ಲಿ ನಾನು ಬಾಲ್ಯದ ದಿನಗಳನ್ನು ಕಳೆದ ಮನೆಯಿತ್ತು. ಕಲ್ಲು ಚಪ್ಪಡಿಗಳ ವಿಶಾಲ ಸೋಪಾನಗಳು, ಅವುಗಳ ಎರಡೂ ಕಡೆ ಮರದ ಕಟಕಟೆಗಳಿದ್ದ ಜಗಲಿಗಳು, ಕುಸುರಿ ಕೆತ್ತನೆಗಳಿಂದ ಕೂಡಿದ ಮುಖ್ಯ ದ್ವಾರ, ಹಿತ್ತಾಳೆ ಪಟ್ಟಿಗಳಿಂದ ಅಲಂಕೃತವಾಗಿದ್ದ ಮರದ ಕಂಬಗಳು, ವಿಶಾಲವಾದ ನಡುಮನೆ, ಹಜಾರ, ಕೋಣೆಗಳು, ದೇವರ ಮನೆ, ಕಣಜದ ಮನೆ, ಖಜಾನೆ, ದೊಡ್ಡ ಹಂಡೆ ತೊಟ್ಟಿಗಳಿದ್ದ ನೀರ್ಮನೆ, ಮಹಡಿಯ ಮೇಲೊಂದು ಪ್ರತ್ಯೇಕ ಕೋಣೆ, ಇತ್ಯಾದಿಗಳು ಈ ಭವನದ ಅಂಗವಾಗಿದ್ದವು. ಅಲ್ಲಿ ವಾಸಿಸುತ್ತಿದ್ದ ಅವಿಭಕ್ತ ಕುಟುಂಬದಲ್ಲಿ ಹನ್ನೊಂದು ಮಕ್ಕಳಿದ್ದೆವು.

ಹಿತ್ತಲಿನಲ್ಲಿ ಆಳವಾದ, ಉಪ್ಪು ನೀರಿನ ಎರಡು ಬಾವಿಗಳಿದ್ದವು. ಬಾವಿಯೊಳಗೆ ಬೋರು ಹಾಕಿಸಿದರೂ ನೀರು ಸಿಗುವುದು ದುರ್ಲಭವಾಗಿತ್ತು! ಹಾಗಾಗಿ ಮನೆ ಮಂದಿಯೆಲ್ಲ ಸಾಲಾಗಿ ನಿಂತು, ಮೇಲಿನ ಮನೆಯಿಂದ ಕೊಡಗಳಲ್ಲಿ ನೀರನ್ನು ಸಾಗಿಸಿ, ಹಂಡೆ ತೊಟ್ಟಿ ತುಂಬಿಸುತ್ತಿದ್ದೆವು. ಸಿಹಿ ನೀರಿನ ಬವಣೆಯಂತೂ ಹೇಳತೀರದು. ಊರ ಹೊರಗೆ ಮೈಲಿ ದೂರದಲ್ಲಿದ್ದ ಬಾವಿಯಿಂದ ನೀರು ಸೇದಿಕೊಂಡು ತರುವುದು ಅಮ್ಮ ಮತ್ತು ದೊಡ್ಡಮ್ಮನ ಪಾಲಿನ ಕರ್ತವ್ಯವಾಗಿತ್ತು. ಬೇಸಿಗೆಯಲ್ಲಿ ಚಿಕ್ಕ ಚೊಂಬಿನಲ್ಲಿ ಸೇದಿ ಸೇದಿ ಬಿಂದಿಗೆ ತುಂಬಿಸಬೇಕಿತ್ತು. ರಾಟೆ ಮತ್ತು ಹಗ್ಗ ಕೊಂಡೊಯ್ಯುವ ಬಂಟರಾಗಿದ್ದೆವು ನಾವು.

ನಡುಮನೆಯ ಕಂಬಗಳ ಬಳಿಯ ಜಾಗಕ್ಕಾಗಿ ನಾವು ಪೈಪೋಟಿ ನಡೆಸುತ್ತಿದ್ದೆವು. ಸಂಜೆಯಾಗುತ್ತಿದ್ದಂತೆ ಚೀಲ ಇಟ್ಟು ಜಾಗ ಕಾಯ್ದಿರಿಸಿಕೊಳ್ಳುತ್ತಿದ್ದೆವು. ದೀಪಂಜ್ಯೋತಿ ಪರಂಜ್ಯೋತಿ... ಯಿಂದ ಆರಂಭಿಸಿ ಹಲವು ದೇವರ ಸ್ತೋತ್ರಗಳ ಪಠಣ, ಏಳರಿಂದ ಎಂಟರ ತನಕ ಅಧ್ಯಯನ, ಎಂಟಕ್ಕೆ ಸರಿಯಾಗಿ ಊಟ. ಪ್ರತಿ ಸಂಜೆಯ ವೇಳಾಪಟ್ಟಿ ಇದಾಗಿತ್ತು. ಮಕ್ಕಳನ್ನು ಸುತ್ತ





ಕೂಡಿಸಿಕೊಂಡು ಅಮ್ಮ ಕೈತುತ್ತು ಹಾಕುತ್ತಿದ್ದರು. ನನ್ನ ಗಮನ ಸೋದರ ಸೋದರಿಯರ ಕೈಗಳ ಕಡೆಗೇ ಇರುತ್ತಿತ್ತು; ಅವರಿಗೆ ದೊಡ್ಡ ತುತ್ತು ಹಾಕಿಬಿಡುವರೇನೋ ಎಂಬ ಶಂಕೆ ನನ್ನದಾಗಿತ್ತು! ಭಾಗ್ಯವಂತನಾಗುವ ಬಯಕೆಯಿಂದ ಪಾತ್ರೆಯನ್ನು ಬಳಿದು ತೆಗೆದ ಕಡೆಯ ತುತ್ತಿಗೆ ಮುತ್ತಿಗೆ ಹಾಕುತ್ತಿದ್ದೆನಂತೆ.

ಮನೆಯಲ್ಲಿ ರಾಸುಗಳೂ ಇದ್ದವು. ಸಂಜೆ ಹಸುವಿನ ಹಾಲು ಕರೆಯುವ ಸಮಯಕ್ಕೆ ಸರಿಯಾಗಿ ಕೊಟ್ಟಿಗೆಯ ಬಳಿ ಹಾಜರಾಗಿ ಬೆಚ್ಚನೆಯ ನೊರೆಹಾಲನ್ನು ಕುಡಿಯಲು ಹಾತೊರೆಯುತ್ತಿದ್ದೆವು. ದೊಡ್ಡ ಕಂಚಿನ ಲೋಟದ ತುಂಬ ಹಾಲು ಇರದಿದ್ದಲ್ಲಿ ಲೋಟದ ಸಮೇತ ಬಿಸಾಡುತ್ತಿದ್ದೆನಂತೆ! ಅಡುಗೆ ಮನೆ ಕಂಬಕ್ಕೆ ಕಟ್ಟಿದ ಹಗ್ಗಗಳ ಆಸರೆಯಲ್ಲಿ ಕಡೆಗೋಲಿನಿಂದ ಮೊಸರು ಕಡೆಯುತ್ತಿದ್ದಾಗ ನಾನಲ್ಲಿ ಹಾಜರಿರುತ್ತಿದ್ದೆ. ರೊಟ್ಟಿಗೆ ಹಸನಾದ ಹೊಸ ಬೆಣ್ಣೆ ಹಾಕಿ ಕೊಡುವುದನ್ನೇ ಕಾಯುತ್ತಿದ್ದೆ.

### ದಸರಾ ಬೊಂಬೆ ಸಂಭ್ರಮ

ದಸರೆ ಸಂಭ್ರಮದ ಸಮಯ. ಛಾವಣಿಯೆತ್ತರದವರೆಗೆ ಜೋಡಿಸಿದ ಬೆಂಚುಗಳ ಮೇಲೆ ನೂರಾರು ಬೊಂಬೆಗಳನ್ನು ಕೂಡಿಸುತ್ತಿದ್ದರು. ಮುಂಭಾಗದಲ್ಲಿ ಮರಳು ಹರಡಿ, ಪಾರ್ಕ್ ನಿರ್ಮಿಸಿ, ಅದರಲ್ಲಿ ರಾಗಿ ಪೈರು ಬೆಳೆಸುವುದು ಮಕ್ಕಳಿಗೆ ಖುಷಿ ತರುವ ಸಂಗತಿಯಾಗಿತ್ತು. ನವರಾತ್ರಿಯ ಸಂಜೆಯಲ್ಲಿ ಬೊಂಬೆಗಳನ್ನು ನೋಡಲು ಬರುತ್ತಿದ್ದ ಊರ ಮಂದಿಗೆ ಹಂಚಲು ತಯಾರಾಗುತ್ತಿದ್ದ ಬೊಂಬೆ ಬಾಗಿನಕ್ಕಾಗಿ ನಾನೂ ಕಾಯುತ್ತಿದ್ದ ನೆನಪು.

ಈ ಮನೆಯಲ್ಲಿ ನನಗೆ ಎದ್ದು ಕಾಣುತ್ತಿದ್ದುದು ಆಜಾನುಬಾಹುವಾಗಿದ್ದ ನಮ್ಮ ತಾತನವರು. ಅವರ ಧ್ವನಿ ಇಡೀ ಊರಿಗೇ ಕೇಳಿಸುತ್ತಿತ್ತೆನ್ನಬಹುದು. ‘ಸರ್ವ ವಸ್ತ್ರಾಂಗ ತೋಪಿವ, ಯಸ್ಮರೇತ್ ಪುಂಡರೀಕಾಕ್ಷಂ ಸಬಾಹ್ಯಾಂತರ ಶುಚಿಃ’ ಎಂದು ನೀರು ಮನೆಯಿಂದಲೇ ಅಜ್ಜ ಆರಂಭಿಸುತ್ತಿದ್ದ ಮಂತ್ರ ಪಠಣ ಪೂಜಾ ಸಮಯವನ್ನು ಸಾರುತ್ತಿತ್ತು. ಮೋಹಕ ಕೆತ್ತನೆಯ ಮರದ ಮಂಟಪದಲ್ಲಿನ ಹಿತ್ತಾಳೆಯ ಮಂದಾಸನದಲ್ಲಿ ಸ್ಥಾಪಿತವಾಗಿದ್ದ ತಾಮ್ರದ ಸುಂದರ ಶ್ರೀರಾಮ ವಿಗ್ರಹದೊಡನೆ ಇನ್ನೂ ಹಲವಾರು ದೇವರ ವಿಗ್ರಹಗಳಿಗೆ ನಿತ್ಯ ಪೂಜೆ ನಡೆಯುತ್ತಿತ್ತು. ತಾತನವರು ಮನೆಯ ಮುಂದಿದ್ದ ಕಲ್ಲು ಬೆಂಚಿನ ಮೇಲೆ ಮಲಗಿಕೊಳ್ಳುತ್ತಿದ್ದರು. ಬೇಸಗೆಯ ದಿನಗಳಲ್ಲಿ, ಸಂಜೆಯಾಗುತ್ತಿದ್ದಂತೆ ಒಂದೆರಡು ಕೊಡ ನೀರು ಸುರಿದು ಕಲ್ಲು ಹಾಸನ್ನು ತಂಪಾಗಿಸುವ ವಾಡಿಕೆಯಿತ್ತು.

ಕಲಾತ್ಮಕ ಹಿಡಿಕೆ ಚಿಲಕಗಳನ್ನು ಹೊಂದಿದ್ದು ನಡು ಮನೆಯ ಗೋಡೆಯಲ್ಲಿ ಅಡಕವಾಗಿದ್ದ ಮರದ ಕಪಾಟಿನಲ್ಲಿ ತಾತನವರು ಬಿಸ್ಕತ್ ಮತ್ತು ಪೆಪ್ಪರಮೆಂಟ್‌ಗಳನ್ನು ದಾಸ್ತಾನು ಮಾಡುತ್ತಿದ್ದರು. ಅದಕ್ಕೆ ನಾವು ಇರುವೆಗಳಂತೆ ಮುತ್ತಿಕೊಳ್ಳುತ್ತಿದ್ದೆವು. ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ ಆ ಮನೆಯನ್ನು ಶಾಶ್ವತವಾಗಿ ತ್ಯಜಿಸಬೇಕಾದ ಅನಿವಾರ್ಯತೆಯೊದಗಿತು. ಆಗ ಅಲ್ಲಿಂದ ತಂದು ನಮ್ಮ ಮನೆಯಲ್ಲಿ ಅಳವಡಿಸಿಕೊಂಡ ಆ ಮರದ ಕಪಾಟು ನನ್ನ ಬಾಲದ ಭೂಮಿಕೆಯಾಗಿದ್ದ ಭವನವನ್ನು ಸದಾ ನೆನಪಿಸುತ್ತದೆ. ■